ಟೆಲೆಕ್ಸ್ : 845-2435 ಕೆಇಬಿಇಎನ್
ಗ್ರಾಮ್ಸ್ : ಕೆಪ್ಟ್ರಾನ್ಸ್

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಪೊರೇಟ್ ಆಫೀಸ್,
"ಕಾವೇರಿ ಭವನ"
ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06

ದಿನಾಂಕ 01 DEC 2008

## ಸುತ್ತೋಲೆ

ವಿಷಯ: ದಿನಾಂಕ: 01.04.2006 ರ ನಂತರ ಸೇವೆಗೆ ಸೇರಿದ ನೌಕರರಿಗೆ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 05.07.2007 ಹಾಗೂ 21.08.2007.
2. ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಇವರ ದಿನಾಂಕ: 18.11.2008 ರ ಟಿಪ್ಪಣಿ.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 01.04.2006 ಕ್ಕಿಂತ ಹಿಂದೆ ಸರ್ಕಾರಿ ಸೇವೆಯಲ್ಲಿದ್ದು, ತದನಂತರ ನಿಗಮ/ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ಯಾವುದೇ ಹುದ್ದೆಗೆ ಸೂಕ್ತಪಥದ ಮೂಲಕ ಅರ್ಜಿಯನ್ನು ಸಲ್ಲಿಸಿ ಆಯ್ಕೆಗೊಂಡು ಸಂಬಂಧಪಟ್ಟ ಸರ್ಕಾರಿ ಪ್ರಾಧಿಕಾರಿಯಿಂದ ಕರ್ತವ್ಯದಿಂದ ಬಿಡುಗಡೆ ಹೊಂದಿ ಅಥವಾ ನಿಯಮದ ಪ್ರಕಾರ ಕರ್ತವ್ಯಕ್ಕೆ ರಾಜೀನಾಮೆಯನ್ನು ನೀಡಿ ದಿನಾಂಕ: 01.04.2006 ಅಥವಾ ನಂತರ ನಿಗಮ/ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆಯ್ಕೆಗೊಂಡ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರೆ ಅಂತಹ ನೌಕರರು ಸರ್ಕಾರದಲ್ಲಿ ಸಲ್ಲಿಸಿರುವ ಸೇವಾವಧಿಯಲ್ಲಿ ಪಡೆದಿರುವ ಒಟ್ಟು ವೇತನದ ಮೊತ್ತದಲ್ಲಿ 1/8ನೇ ಭಾಗವನ್ನು ಶೇಕಡ 3 ರ ಬಡ್ಡಿ ಸಮೇತ ನಿಗಮ / ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡಿದರೆ ಅವರಿಗೆ ನಿಗಮದ ದಿನಾಂಕ: 05.07.2007 ರ ಆದೇಶದ ಪ್ರಕಾರ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಯಿಂದ ವಿನಾಯಿತಿಯನ್ನು ನೀಡಿ, ಕವಿಮಂ ನೌಕರರ ಸೇವಾ ನಿಬಂಧನೆ 182 (ಎ) ಪ್ರಕಾರ ಲಭ್ಯವಿರುವ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಬಹುದೆಂದು ಸ್ಪಷ್ಟೀಕರಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ)

SA.3
for Pl. NDCPS file
19/2/14

ಗೆ:
1. ಶ್ರೀ.ಪಿ.ಜಿ.ಅಮ್ಮಿನಬಾವಿ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ:659).
2. ಶ್ರೀ.ಎಲ್.ರವಿ, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ ಎಲ್ಲಾ ಎಸ್ಕಾಂಗಳು.
3. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ/ಎಲ್ಲಾ ಎಸ್ಕಾಂಗಳು/ಕವಿನಿನಿ, ಜೋಗ್/ಯಲಹಂಕ.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಲ್ಲಾ ಎಸ್ಕಾಂಗಳು.
5. ಎಲ್ಲಾ ಅಧೀಕ್ಷಕ ಇಂಜಿನಿಯರ್, ಕವಿಪ್ರನಿನಿ/ಎಲ್ಲಾ ಎಸ್ಕಾಂಗಳು.

NDCPS